ಸಿಡಬ್ಲ್ಯೂಃ17 ಪಿಡಬ್ಲ್ಯೂಃ 8

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

**ಸಿ.ಸಿ. ಸಂಖ್ಯೆಃ 1056/2024**

**ಸಾಕ್ಷಿಯನ್ನು ದಿಃ 24.04.2025 ರಂದು ವಿಡಿಯೊ ಕಾನ್ಫರೇನ್ಸ್ ಮೂಲಕ ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 311 ಅಡಿ ಸಲ್ಲಿಸಿದ ಅರ್ಜಿ ಮೇಲಿನ ಆದೇಶದ ಮೇರೆಗೆ ವಿಡಿಯೊ ಕಾನ್ಫರೇನ್ಸ್ ಮೂಲಕ ಪಾಟೀಸವಾಲುಃ ಆರೋಪಿ ಪರ ಶ್ರೀ ಹೆಚ್ .ಜಿ.ಕೆ ವಕೀಲರಿಂದಃ**

ಈ ಪ್ರಕರಣದಲ್ಲಿ ಹಾಜರು ಪಡಿಸಿದ ಪೋಟೊಗಳನ್ನು ಪೊಲೀಸ್ ಸಿಬ್ಬಂದ ಪ್ರಸಾದ್ ಎಂಬುವವರು ತೆಗೆದಿದ್ದರು. ಅವರು ಬಳಸಿದ ಕ್ಯಾಮೆರಾ ಯಾವುದು ಎಂಬ ಪ್ರಶ್ನೆಗೆ ಸಾಕ್ಷಿ ಮೊಬೈಲ್ ನಲ್ಲಿ ತೆಗೆದಿದ್ದರು ಎನ್ನುತ್ತಾರೆ. ಪೋಟೊಗಳಿಗೆ ಸಂಬಂಧಿಸಿದಂತೆ ದೋಷಾರೋಪಣಾ ಪಟ್ಟಿಯ ಜೊತೆ 65 ಬಿ. ಪ್ರಮಾಣ ಪತ್ರದ ಜೊತೆ ಹಾಜರುಪಡಿಸಿಲ್ಲ. ಪೋಟೊ ಪ್ರಿಂಟ್ ತೆಗೆದ ವ್ಯಕ್ತಿಯನ್ನು ಸಾಕ್ಷಿಯನ್ನಾಗಿ ಸಾಕ್ಷಿ ಪಟ್ಟಿಯಲ್ಲಿ ಸೇರಿಸಿಲ್ಲ. ಮಹಜರ್ ಅನ್ನು ಸ್ಥಳದಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ ನಂತರ ಸ್ಥಳಕ್ಕೆ ಹೋಗಿರುತ್ತೇನೆ. ಆದರೆ ಸಮಯ ಎಷ್ಟೇಂದು ನನಗೆ ಹೇಳಲು ಆಗುವುದಿಲ್ಲ. ಚಾಸಾ 2 ರವರು ಸ್ಥಳ ತೋರಿಸಿಲ್ಲ ಎಂದರೆ ಸರಿಯಲ್ಲ. ತಪಾಸಣೆಗೆ ಒಳಡಿಸಿ ಐ.ಎಂ.ವಿ ವರದಿ ಕೊಡುವಂತೆ ಕೊಟ್ಟಂತಹ ಮನವಿಯನ್ನು ಲಗತ್ತಿಸಿರುತ್ತೇನೆ. ಸದರಿ ಮನವಿಯೊಂದಿಗೆ ವಾಹನದ ಪೋಟೊವನ್ನು ಲಗತ್ತಿಸಿ ಕೊಟ್ಟಿದ್ದರು. ದೋಷಾರೋಪಣಾ ಪಟ್ಟಿ ಸಲ್ಲಿಸುವ ಪೂರ್ವದಲ್ಲಿ ಐ.ಎಂ.ವಿ ವರದಿಯನ್ನು ಪರಿಶೀಲಿಸಿರುವುದಿಲ್ಲ. ಆನಂತರದಲ್ಲಿ ವರು

ತಪ್ಪಾಗಿ ಕೊಟ್ಟಿದ್ದಾರೆ ಎಂದು ನುಡಿದಿರುತ್ತಾರೆ. ಆರೋಪಿಯಿಂದ ವಶಪಡಿಸಿಕೊಂಡ ವಾಹನವನ್ನು ತಪಾಸಣೆಗೆ ಒಳಪಡಿಸಿಲ್ಲ ನಾನು ಬೇರೆ ಯಾವುದೊ ವಾಹನವನ್ನು ಕಪ್ಪು ಮತ್ತು ನೀಲಿ ಬಣ್ಣದ ಆಲ್ಟೋ ಕಾರನ್ನು ತಪಾಸಣೆಗೆ ಕಳುಹಿಸಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ಪುನಃ ಆನಂತರ ಅದನ್ನು ಸರಿಪಡಿಸಿಕೊಳ್ಳಲಾಗಿದೆ ಎಂದು ನುಡಿಯುತ್ತಾರೆ. ಮೃತ ವ್ಯಕ್ತಿ ಯಾವ ದಿಕ್ಕಿನಿಂದ ಯಾವ ದಿಕ್ಕಿನ ಕಡೆಗೆ ಹೋಗುತ್ತಿದ್ದರು ಎಂದು ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ.

ಮೈಸೂರು –ಮಂಗಳೂರು ರಸ್ತೆ ತುಂಬಾ ಬ್ಯೂಸಿಯಾದ ರಸ್ತೆ ಎಂದರೆ ಸರಿ. ಸಂಜೆ ವೇಳೆಯಲ್ಲಿ ವಾಹನದ ದಟ್ಟಣೆ ಜಾಸ್ತಿ ಇರುತ್ತದೆ ಎಂದರೆ ಸರಿ. ದಿಃ24.05.2024 ರಂದು ಅಪಘಾತ ಆಗುವ ಪೂರ್ವದಲ್ಲಿ ಠಾಣೆಗೆ ಒಬ್ಬ ವ್ಯಕ್ತಿಯಿಂದ ಕರೆ ಬಂದಿತ್ತು ಎಂದರೆ ಸರಿಯಲ್ಲ. ಹಾಗೆ ಫೋನ್ ಕರೆಯಲ್ಲಿ ಒಬ್ಬ ಮಹಿಳೆ ರಸ್ತೆಯಲ್ಲಿ ಕೂಗಾಡುತ್ತಿದ್ದಾಳೆ, ಸಿಕ್ಕ ಸಿಕ್ಕ ವಾಹನಗಳ ಮುಂದೆ ಹೋಗುತ್ತಿದ್ದಾರೆ ಬಂದು ಸಹಾಯ ಮಾಡಿ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಸದರಿ ಅಪಘಾತ ಆರೋಪಿಯ ವಾಹನದಿಂದ ಆಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರಾದ ಚಾಸಾ 2 ರವರು ಯಾವುದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ. 10 ಮತ್ತು 11 ರಂತೆ ಯಾವುದೆ ನೊಟೀಸು ಆರೋಪಿಗೆ ಕೊಟ್ಟಿಲ್ಲ, ಯಾವುದೆ ಉತ್ತರ ಪಡೆದಿಲ್ಲ ಈ ಕೇಸ್ ಗಾಗಿ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಐ.ಎಂ.ವಿ ವರದಿಯನ್ನು ಈ ಕೇಸ್ ಗಾಗಿ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ, ಸ್ಥಳದಲ್ಲಿ ಯಾವುದೆ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಸ್ಥಳ ಮಹಜರ್ ಗೆ ಸಹಿ ಮಾಡಿರುವ ವ್ಯಕ್ತಿಗಳು ಸ್ಥಳೀಕರಲ್ಲ ಎಂದರೆ ಸರಿಯಲ್ಲ. ಸ್ಥಳದ ಅಕ್ಕ ಪಕ್ಕದವನ್ನು ಅಪಘಾತದ ಬಗ್ಗೆ ವಿಚಾರಿಸಿರುತ್ತೇನೆ ಆದರೆ ಯಾರೂ ಮುಂದೆ ಬಂದಿರುವುದಿಲ್ಲ ಎನ್ನುತ್ತಾರೆ. ಮೃತ ಮಹಿಳೆ ಆ ದಿನ ರಸ್ತೆಯಲ್ಲಿ ತೂರಾಡಿಕೋeಂಡು ಹೊ್ಾಗುತ್ತಿದ್ದು, ಬೇರೆ

ವಾಹನದಿಂದ ತಪ್ಪಿಸಿಕೊಳ್ಳಲು ಆರೋಪಿಯ ವಾಹನದ ಕಡೆ ಹೋಗಿ ಮೃತ ಪಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಆರೋಪಿಯ ವಾಹನದಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಅತಿವೇಗ ಮತ್ತು ಅಜಾರೂಕತೆಯ ಚಾಲನೆಯಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಸೂಕ್ತ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ಮೃತ ಮಹಿಳೆಯ ಗಂಡ ಪರಿಹಾರಕ್ಕಾಗಿ ಪ್ರಕರಣ ದಾಖಲಸಿದ್ದು, ಅದಕ್ಕೆ ಅನುಕೂಲವಾಗಲಿ ಎಂದು ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಆಗಿದೆ ಎಂದು ನಮೂದಿಸಿರುವ ಸ್ಥಳ ರಸ್ತೆಯ ಮಧ್ಯ ಭಾಗ ಎಂದರೆ ಸರಿ.

**ಮರುವಿಚಾರಣೆ ಇಲ್ಲಃ**

**ಪಿ.ಐ ಲಷ್ಕರ್ ಪೊಲೀಸ್, ಮೈಸೂರು ನಗರ ರವರು ವಿಡಿಯೊ ಕಾನ್ಫರೇನ್ಸ್ ಮೂಲಕ ಹಾಜರಾಗಿ ಸಾಕ್ಷಿ ನೀಡಿರುತ್ತಾರೆ, ಆದ ಕಾರಣ ಸಹಿಯನ್ನು ಪಡೆದುಕೊಂಡಿರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.